# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 630 (494) |
| ಸದಸ್ಯರ ಹೆಸರು | : | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 20-02-2024 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | 2020-21 ರಿಂದ 2023-24ರ ಸಾಲಿನಲ್ಲಿ ಬೀದರ್ ಜಿಲ್ಲೆಯ ಪಟ್ಟಣ ಪಂಚಾಯತ್/ ಪುರಸಭೆ/ ನಗರಸಭೆಗಳಲ್ಲಿ SFC ಹಾಗೂ 15ನೇ ಯೋಜನೆಯಡಿಯಲ್ಲಿ ನಿಯಮಗಳಂತೆ ಹಾಗೂ ಯೋಜನೆಗಳಂತೆ ಅನುದಾನ ಖರ್ಚು ಮಾಡಲಾಗಿದೆಯೇ; ಮಾಡಿದ್ದಲ್ಲಿ, ಅನುದಾನದ ಕ್ರಿಯಾ ಯೋಜನೆಯ ಪ್ರತ್ಯೇಕವಾದ ಸಂಸ್ಥೆಗಳ ವಿವರ ನೀಡುವುದು; | **1) <u>15ನೇ ಹಣಕಾಸು ಆಯೋಗದ ಅನುದಾನ:</u>**<br><br>2020-21 ರಿಂದ 2023-24ನೇ ಸಾಲಿನವರೆಗೆ ಬೀದರ್ ಜಿಲ್ಲೆಯ ಪಟ್ಟಣ ಪಂಚಾಯತ್/ಪುರಸಭೆ/ ನಗರಸಭೆಗಳಲ್ಲಿ ಅನುದಾನ ಬಳಕೆಯ ಮಾರ್ಗಸೂಚಿಯಂತೆ, ಕ್ರಿಯಾ ಯೋಜನೆಯನ್ನು ತಯಾರಿಸಿ, ಕೌನ್ಸಿಲ್ ಅನುಮೋದನೆ ಪಡೆದು, ಬೀದರ್ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ ಕಾಮಗಾರಿಗಳ ಕ್ರಿಯಾ ಯೋಜನೆ ಅನುಮೋದನೆ ಪಡೆದು ನಿಯಮಾನುಸಾರ ಅನುಷ್ಠಾನಗೊಳಿಸಿ ವೆಚ್ಚ ಮಾಡಲಾಗುತ್ತಿದೆ. ನಗರ ಸ್ಥಳೀಯ ಸಂಸ್ಥೆವಾರು ಕಾಮಗಾರಿಗಳ ಕ್ರಿಯಾ ಯೋಜನೆಯ ವಿವರಗಳನ್ನು **ಅನುಬಂಧ-1ರಲ್ಲಿ ನೀಡಿದೆ.**<br><br>**2) <u>ಎಸ್.ಎಫ್.ಸಿ.:</u>**<br><br>2020-21 ರಿಂದ 2023-24 ನೇ ಸಾಲಿನವರೆಗೆ ಬೀದರ ಜಿಲ್ಲೆಯ ಪಟ್ಟಣ ಪಂಚಾಯತ್/ಪುರಸಭೆ/ ನಗರಸಭೆಗಳಲ್ಲಿ SFC ಮುಕ್ತನಿಧಿ, SFC ಕುಡಿಯುವ ನೀರು ಹಾಗೂ SFC ವಿಶೇಷ ಅನುದಾನ ಯೋಜನೆಗಳಡಿ ಸರ್ಕಾರದಿಂದ ಹಂಚಿಕೆಯಾಗಿ, ಬಿಡುಗಡೆಯಾದ ಅನುದಾನವನ್ನು ಕ್ರಿಯಾ ಯೋಜನೆಯಂತೆ ನಗರ ಸ್ಥಳೀಯ ಸಂಸ್ಥೆವಾರು ಪ್ರಗತಿ ಸಾಧಿಸಿ ಖರ್ಚುಮಾಡಲಾದ ಪ್ರಗತಿಯ ಅನ್‌ಲೈನ್ ವರದಿಯ ವಿವರವನ್ನು **ಅನುಬಂಧ-2 ರಲ್ಲಿ ನೀಡಿದೆ.**<br><br>2020-21 ರಿಂದ 2023-24 ರ ಸಾಲಿನಲ್ಲಿ ಬೀದರ ಜಿಲ್ಲೆಯ 7 ನಗರಸ್ಥಳೀಯ ಸಂಸ್ಥೆಗಳಲ್ಲಿ SFC ಹಾಗೂ 15ನೇ ಹಣಕಾಸು ಯೋಜನೆಯಡಿಯಲ್ಲಿ ನಿಯಮಗಳಂತೆ ಹಾಗೂ ಯೋಜನೆಗಳ ಮಾರ್ಗಸೂಚಿಯಂತೆ ಅನುದಾನ ಖರ್ಚು ಮಾಡಲಾಗಿದೆ. |
| (ಆ) | 3ನೇ ಹಾಗೂ 4ನೇ ಹಂತದ ನಗರೋತ್ಥಾನದ ಯೋಜನೆಗಳ ಅನುದಾನದ ಕ್ರಿಯಾ ಯೋಜನೆಯಂತೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆಯೇ; ಹಾಗಿದ್ದಲ್ಲಿ, ಕ್ರಿಯಾ ಯೋಜನೆ ಮತ್ತು ಅನುಷ್ಠಾನದ ಸ್ಥಿತಿಗತಿಯ ಕುರಿತು ವಿವರ ನೀಡುವುದು; | **<u>ನಗರೋತ್ಥಾನ:</u>**<br><br>3ನೇ ಹಾಗೂ 4ನೇ ಹಂತದ ನಗರೋತ್ಥಾನದ ಯೋಜನೆಯಡಿ ಬಿಡುಗಡೆಯಾದ ಹಾಗೂ ಖರ್ಚಾದ ಅನುದಾನದ ವಿವರವನ್ನು **ಅನುಬಂಧ-3ರಲ್ಲಿ** ನೀಡಿದೆ. ಕಾಮಗಾರಿ ವಿವರಗಳನ್ನು **ಅನುಬಂಧ-4ರಲ್ಲಿ ನೀಡಿದೆ.** |
| (ಇ) | ಈ ಸ್ಥಳೀಯ ಸಂಸ್ಥೆಗಳಲ್ಲಿ SFC ಮತ್ತು 15ನೇ ಹಣಕಾಸು ಯೋಜನೆಯಡಿಯಲ್ಲಿ ಕೈಗೊಂಡ | **1) <u>15ನೇ ಹಣಕಾಸು ಆಯೋಗದ ಅನುದಾನ:</u>**<br><br>15ನೇ ಹಣಕಾಸು ಆಯೋಗದ ಅನುದಾನದಡಿ ಬೀದರ್ |

| | | |
|---|---|---|
| | ಕಾಮಗಾರಿಗಳ ಅನುಷ್ಠಾನ ಯಾವ ಹಂತದಲ್ಲಿದೆ; (ಸಂಸ್ಥೆಗಳವಾರು ವಿವರ ನೀಡುವುದು) | ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳು 2020-21ನೇ ಸಾಲಿನಿಂದ 2023-24ನೇ ಸಾಲಿನವರೆಗೆ ಕೈಗೊಂಡ 1455 ಕಾಮಗಾರಿಗಳಲ್ಲಿ 950 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.<br>• ರೂ. 27.25 ಕೋಟಿ ಮೊತ್ತದ 420 ಕಾಮಗಾರಿಗಳು ಪ್ರಗತಿಯಲ್ಲಿವೆ.<br>• ರೂ. 8.38 ಕೋಟಿ ಮೊತ್ತದ 63 ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿವೆ.<br>• ರೂ. 3.60 ಕೋಟಿ ಮೊತ್ತದ 22 ಕಾಮಗಾರಿಗಳಿಗೆ ಟೆಂಡರ್ ಕರೆಯಬೇಕಿದೆ.<br><br>ಬಿಡುಗಡೆಯಾದ ಒಟ್ಟು ಅನುದಾನ ರೂ. 80.13 ಕೋಟಿಗಳಲ್ಲಿ ರೂ. 53.59 ಕೋಟಿಗಳನ್ನು ಈತನಕ ವೆಚ್ಚ ಮಾಡಲಾಗಿದೆ.<br><br>ನಗರ ಸ್ಥಳೀಯ ಸಂಸ್ಥೆವಾರು ವಿವರಗಳನ್ನು **ಅನುಬಂಧ-5ರಲ್ಲಿ** ನೀಡಿದೆ.<br><br>**2) <u>ಎಸ್.ಎಫ್.ಸಿ:</u>**<br><br>2020-21 ರಿಂದ 2023-24ನೇ ಸಾಲಿನಲ್ಲಿ ಬೀದರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳವಾರು SFC ಮುಕ್ತನಿಧಿ, SFC ಕುಡಿಯುವ ನೀರು ಹಾಗೂ SFC ವಿಶೇಷ ಅನುದಾನ ಯೋಜನೆಗಳಡಿ ಕೈಗೊಂಡ ಕಾಮಗಾರಿಗಳ ಅನುಷ್ಠಾನದ ಪ್ರಗತಿಯ ಅನ್‌ಲೈನ್ ವರದಿಯ ವಿವರವನ್ನು **ಅನುಬಂಧ-6 ರಲ್ಲಿ** ನೀಡಿದೆ. |
| (ಈ) | ಈ ಸಂಸ್ಥೆಗಳಲ್ಲಿ 22.5% ಹಾಗೂ 7.25% ಅನುದಾನ ನಿಯಮದಂತೆ ಸದ್ಬಳಕೆ ಮಾಡಲಾಗಿದೆಯೇ; ಮಾಡಿದ್ದಲ್ಲಿ, ವರ್ಷವಾರು, ಸಂಸ್ಥೆಗಳವಾರು ವಿವರ ನೀಡುವುದು; | 1) ಸಿಎಂಎಸ್‌ಟಿಡಿಪಿ ಹಂತ-3 ಮತ್ತು ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4ರ ಯೋಜನೆಯಡಿಯ ಕಾಮಗಾರಿಗಳ ವಿವರಗಳನ್ನು **ಅನುಬಂಧ-4ರಲ್ಲಿ** ನೀಡಿದೆ.<br><br>**2) <u>ಎಸ್.ಎಫ್.ಸಿ:</u>**<br><br>ಬೀದರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ SFC ಮುಕ್ತನಿಧಿ ಯೋಜನೆಯ ಶೇ.24.10 ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಾಂಗದ ಕಲ್ಯಾಣ ಕಾರ್ಯಕ್ರಮ ಹಾಗೂ ಶೇ.7.25 ರ ನಗರದ ಇತರೆ ಬಡ ಜನರ ಕಲ್ಯಾಣ ಕಾರ್ಯಕ್ರಮಗಳಡಿ ಸರ್ಕಾರದ ಸುತ್ತೋಲೆಯ ನಿಯಮಗಳಂತೆ ಅನುದಾನವನ್ನು ಸದ್ಬಳಕೆ ಮಾಡಲಾಗಿರುತ್ತದೆ. ವರ್ಷವಾರು ನಗರ ಸ್ಥಳೀಯ ಸಂಸ್ಥೆವಾರು ಪ್ರಗತಿಯ ಅನ್‌ಲೈನ್ ವರದಿಯ ವಿವರಗಳನ್ನು **ಅನುಬಂಧ-7 ರಲ್ಲಿ** ನೀಡಿದೆ. |
| (ಉ) | ಈ ಯೋಜನೆಗಳಿಗೆ ಕ್ರಿಯಾ ಯೋಜನೆ ಮಾಡಬೇಕಾದರೆ ವಿಧಾನ ಸಭಾ, ವಿಧಾನ ಪರಿಷತ್ ಶಾಸಕರುಗಳ ತಪಾಸಣೆ ಹಾಗೂ ಅವಶ್ಯಕತೆ ಇರುವುದಿಲ್ಲವೆ; ಹಾಗಿದ್ದಲ್ಲಿ, ಏಕೆ ಪ್ರಸ್ತಾವನೆ ಪಡೆಯುವುದಿಲ್ಲ ಇಲ್ಲವಾದಲ್ಲಿ ಅದಕ್ಕೆ ಸೂಕ್ತ ಕಾರಣ ನೀಡುವುದು? (ವಿವರ ನೀಡುವುದು) | **1) <u>15ನೇ ಹಣಕಾಸು ಆಯೋಗದ ಅನುದಾನ:</u>**<br><br>15ನೇ ಹಣಕಾಸು ಆಯೋಗದ ಅನುದಾನದಡಿ ಹಂಚಿಕೆಯಾದ ಅನುದಾನಕ್ಕೆ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸಿ, ಕೌನ್ಸಿಲ್ ಅನುಮೋದನೆ ಪಡೆದು, ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿ ಅನುಮೋದನೆ ಪಡೆಯಬೇಕು ಎಂದು ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 177 SFC 2020, ದಿನಾಂಕ 10-11-2021ರಲ್ಲಿ ಸೂಚಿಸಲಾಗಿದೆ.<br><br>ವಿಧಾನಸಭಾ ಮತ್ತು ವಿಧಾನ ಪರಿಷತ್ ಶಾಸಕರು ಸಂಬಂಧಿಸಿದ ಕೌನ್ಸಿಲ್ ಸದಸ್ಯರಾದಲ್ಲಿ ಅವರುಗಳ ಗಮನಕ್ಕೆ |

ತರಲಾಗುತ್ತದೆ. ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಅಧಿಕಾರ ನಗರ ಸ್ಥಳೀಯ ಸಂಸ್ಥೆಯ ಕೌನ್ಸಿಲ್ ಗೆ ಇದ್ದು, ಬಹುಮತ ಕೌನ್ಸಿಲ್ ಸಭೆಯ ಸದಸ್ಯರ ಅನುಮೋದನೆಯೊಂದಿಗೆ ಠರಾವು ಪಾಸ್ ಮಾಡಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗುತ್ತದೆ.

**2) <u>ನಗರೋತ್ಥಾನ:</u>**

ನಗರೋತ್ಥಾನ ಯೋಜನೆಗಳಾದ ನಗರೋತ್ಥಾನ ಹಂತ-3 ಹಾಗೂ ಹಂತ-4ರಲ್ಲಿ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಜಿಲ್ಲಾ ಮಟ್ಟದ ಸಮಿತಿ ಸಭೆಯ ನಿರ್ಣಯದಂತೆ ಸಿದ್ಧಪಡಿಸಲಾಗುತ್ತದೆ.

**3) <u>ಎಸ್.ಎಫ್.ಸಿ.:</u>**

ಎಸ್.ಎಫ್.ಸಿ. ಕುಡಿಯುವ ನೀರು ಯೋಜನೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ನಅಇ 125 ಎಸ್.ಎಫ್.ಸಿ. 2023 ದಿನಾಂಕ:18.08.2023 ರನ್ವಯ ನಗರ ಸ್ಥಳೀಯ ಸಂಸ್ಥೆಗಳು ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ಟಾಸ್ಕ್ ಫೋರ್ಸ್‌ನ್ನು ರಚಿಸಿಕೊಂಡು, ಕುಡಿಯುವ ನೀರಿನ ಸಮಸ್ಯ ಬಗೆಹರಿಸಲು ಅವಶ್ಯಕವಿರುವ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ತಯಾರು ಮಾಡಿ, ಜಿಲ್ಲಾಧಿಕಾರಿಗಳಿಂದ ಅನುಮೋದನೆ ಪಡೆದು, ಅನುಷ್ಠಾನಗೊಳಿಸಲಾಗುತ್ತದೆ.

ಎಸ್.ಎಫ್.ಸಿ. ವಿಶೇಷ ಅನುದಾನ ಯೋಜನೆಯಡಿ ಸರ್ಕಾರದ ಆದೇಶ ಸಂಖ್ಯೆ: ನಅಇ 160 ಎಸ್.ಎಫ್.ಸಿ. 2018 ದಿನಾಂಕ:24.11.2018 ರನ್ವಯ ಮಾನ್ಯ ಮುಖ್ಯಮಂತ್ರಿಗಳಿಂದ ಯಾವ ವಿಶೇಷ ಉದ್ದೇಶಗಳಿಗೆ ಅನುದಾನವನ್ನು ಮಂಜೂರು ಮಾಡಲಾಗಿರುತ್ತದೆಯೋ ಅದೇ ಉದ್ದೇಶಕ್ಕೆ ಸ್ಥಳೀಯ ವಿಧಾನಸಭಾ ಸದಸ್ಯರೊಂದಿಗೆ ಸಮಾಲೋಚಿಸಿ, ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಕ್ಕದ್ದು, ಈ ರೀತಿ ಸಿದ್ಧಪಡಿಸಿದ ಕ್ರಿಯಾ ಯೋಜನೆಗೆ ಜಿಲ್ಲಾಧಿಕಾರಿಗಳ ಹಂತದಲ್ಲೇ ಅನುಮೋದನೆಯನ್ನು ಪಡೆದು ಕಾರ್ಯಗತ ಗೊಳಿಸಲಾಗುತ್ತದೆ.

ಎಸ್.ಎಫ್.ಸಿ. ಮುಕ್ತ ನಿಧಿ ಯೋಜನೆಯಡಿ ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ 269 ಎಸ್‌ಎಫ್‌ಸಿ 2015, ದಿನಾಂಕ:16.06.2015 ರನ್ವಯ ಕ್ರಿಯಾ ಯೋಜನೆಯನ್ನು ನಗರ ಸ್ಥಳೀಯ ಸಂಸ್ಥೆಗಳು ಸಿದ್ಧಪಡಿಸಿ ಕೌನ್ಸಿಲ್ ಶಿಫಾರಸ್ಸಿನೊಂದಿಗೆ ಜಿಲ್ಲಾಧಿಕಾರಿಗಳ ಅನುಮೋದನೆ ಪಡೆದು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತದೆ.

ಸಂಖ್ಯೆ:ನಅಇ 63 ಎಸ್‌ಎಫ್‌ಸಿ 2024

**(ರಹೀಂ ಖಾನ್)**
ಪೌರಾಡಳಿತ ಹಾಗೂ ಹಜ್ ಸಚಿವರು